ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.: 193/2020

ಪಿ. ಡಬ್ಲ್ಯು: 04
ಸಿ. ಡಬ್ಲ್ಯು: 04

| | | |
|---|---|---|
| ಸಾಕ್ಷಿದಾರರ ಹೆಸರು | : | ಪುಟ್ಟಸ್ವಾಮಿ |
| ತಂದೆ/ಪತಿಯ ಹೆಸರು | : | ಈಶ್ವರಚಾರಿ |
| ವಯಸ್ಸು | : | 57 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಬೆಳಗೊಳ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 13.09.2022

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಚಾಸಾ.1 ಮತ್ತು 2 ಗೊತ್ತು. ಆರೋಪಿಗಳು ಗೊತ್ತು. 2020 ನೇ ಸಾಲಿನಲ್ಲಿ ಆರೋಪಿತರು ಹಾಗೂ ಚಾಸಾ.1 ಮತ್ತು 2 ರವರ ಮಧ್ಯೆ ಮಧ್ಯಾಹ್ನ 02.30-03.00 ಸಮಯದಲ್ಲಿ ಗಲಾಟೆ ನಡೆದಿತ್ತು. ಗಲಾಟೆ ಚಾಸಾ.1 ಮತ್ತು 2 ರವರ ಗದ್ದೆ ಹತ್ತಿರ ನಡೆದಿರುತ್ತದೆ. ಗದ್ದೆ ವಿಚಾರಕ್ಕೆ ಗಲಾಟೆ ನಡೆದಿರುತ್ತದೆ. ಆರೋಪಿತರು ಗುದ್ದಲಿ ಮತ್ತು ದೊಣ್ಣೆಯಿಂದ ರವಿ ಮತ್ತು ರಾಜುರವರಿಗೆ ಹೊಡೆದಿರುತ್ತಾರೆ. ಅಷ್ಟರಲ್ಲಿ ನಾನು ಮತ್ತು ಗೋವಿಂದರಾಜು ಹೋಗಿ ಜಗಳ ಬಿಡಿಸಿದ್ದೇವೆ ನಂತರ ಗೋವಿಂದರಾಜು ಗಾಯಗೊಂಡಿದ್ದ ಚಾಸಾ.1 ಮತ್ತು 2 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು.

ರವಿ ಮತ್ತು ರಾಜು ರವರ ಮೇಲೆ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ರವಿ ಮತ್ತು ರಾಜು ರವರಿಗೆ ಹೊಡೆಯಲು ಉಪಯೋಗಿಸಿದ್ದ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಗುದ್ದಲಿ ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾಲು.1 ಮತ್ತು 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ಗಲಾಟೆ ನಡೆದ ದಿಃ 07.02.2020 ರಂದು ಮಧ್ಯಾಹ್ನ 03.15 ಎಂದರೆ ಸರಿ. ಗಲಾಟೆಯಲ್ಲಿ ಆರೋಪಿತರು ಅವಾಚ್ಯ ಶಬ್ದಗಳಿಂದ ಚಾಸಾ.1 ಮತ್ತು 2 ರವರಿಗೆ ಬೈದರು ಎಂದರೆ ಸರಿ. ನವೀನ್ ದೊಣ್ಣೆಯಿಂದ ರವಿಯ ಬಲಗೈ ಕಿರುಬೆರಳಿಗೆ ಹೊಡೆದರು ಎಂದರೆ ಸರಿ. ನವೀನ್ ರಾಜುವಿಗೆ ಗುದ್ದಲಿಯಿಂದ ಮೈ ಮೇಲೆ ಹೊಡೆದರು ಎಂದರೆ ಸರಿ. ನವೀನ್ ಮತ್ತು ಪವನ್ ರಾಜುವಿಗೆ ಕೈಯಿಂದ ಮೈ ಮೇಲೆ ಹೊಡೆದರು ಎಂದರೆ ಸರಿ. ನಾವು ಜಗಳ ಬಿಡಿಸಿದ ನಂತರ ಆರೋಪಿತರು ರವಿ ಮತ್ತು ರಾಜುವಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಆರೋಪಿ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ಸಕಾರಣಗಳು ಇಲ್ಲದ ಕಾರಣ ಅವರ ಪ್ರಾರ್ಥನೆಯನ್ನು ತಿರಸ್ಕರಿಸಲಾಗಿದೆ ಮತ್ತು ಆರೋಪಿ ಪರ ಸಾಕ್ಷಿಯ ಪಾಟಿ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.